## ಪ್ರಧಾನ ಹಿರಿಯ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ. ಹುಣಸೂರು.

## ಸಿ.ಸಿ. ಸಂಖ್ಯೆ: 207/2024

**ಸಾಕ್ಷಿಯನ್ನು ದಿಃ 07.04.2026 ರಂದು ಕರೆಸಿ ಪ್ರಮಾಣವಚನ ಬೋದಿಸಲಾಯಿತು.**

**ಅರ್ಜಿಯ ಮೇಲಿನ ಆದೇಶದಂತೆ ಪಾಟೀ ಸವಾಲುಃ ಆರೋಪಿಯ ಪರ ಶ್ರೀ.H.K ವಕೀಲರಿಂದಃ**

ಚಾಸಾ-1 ನನ್ನ ವಾರಗಿತ್ತಿ. ಚಾಸಾ-2 ನನ್ನ ಮೈದ. ನನ್ನ ಮನೆ ಮತ್ತು ಚಾಸಾ-1 ರವರ ಮನೆ ಅಕ್ಕ-ಪಕ್ಕದಲ್ಲಿದೆ. ಚಾಸಾ-1 ಮತ್ತು ಆರೋಪಿಯ ಮನೆಯ ಮಧ್ಯದಲ್ಲಿ ಸುಮಾರು 20 ಮನೆಗಳಿವೆ. ಚಾಸಾ-1 ರವರ ಮಕ್ಕಳು ಶಾಲೆಗೆ ಹೋಗುತ್ತಿದ್ದಾರೆ. ನನಗೆ ಇಬ್ಬರು ಮಕ್ಕಳು. ಒಬ್ಬಳು ಮೊದಲನೇ ಪಿ.ಯು.ಸಿ ಮತ್ತು ಮಗ 9ನೇ ತರಗತಿ ಓದುತ್ತಿದ್ದಾನೆ. 2024ರಲ್ಲಿ ನನ್ನ ಇಬ್ಬರು ಮಕ್ಕಳು ಹೈಸ್ಕೂಲ್ ನಲ್ಲಿ ಓದುತ್ತಿದ್ದರು. ಸಾಮಾನ್ಯವಾಗಿ ಸಂಜೆ 4 ಗಂಟೆ ಮಕ್ಕಳು ಶಾಲೆಯಿಂದ ಮನೆಗೆ ಬರುವ ಸಮಯ. ಸಾಮಾನ್ಯವಾಗಿ ಮಕ್ಕಳು ಶಾಲೆಯಿಂದ ಮನೆಗೆ ಬಂದಾಗ ಅವರನ್ನು ಉಪಚರಿಸಿ ತಿಂಡಿ ಕೊಡುವುದು ವಾಡಿಕೆ ಎಂದರೆ ಸರಿ. ಗಲಾಟೆಯನ್ನು ಯಾರು, ಯಾವ ಕಾರಣಕ್ಕಾಗಿ ಪ್ರಾರಂಭಿಸಿದರು ಎಂದು ನನಗೆ ಗೊತ್ತಿಲ್ಲ. ಚಾಸಾ-1 ರವರು ಈ ಗಲಾಟೆಯಾದ ನಂತರ ತನ್ನ ಮಕ್ಕಳೊಂದಿಗೆ ತವರು ಮನೆಯಲ್ಲಿದ್ದಾರೆ ಎಂದರೆ ಸರಿಯಲ್ಲ. ಗಂಡನೊಂದಿಗೆ ಇದ್ದಾರೆ. ಈ ಹಿಂದೆ ಚಾಸಾ-1 ಮತ್ತು 2 ರವರ ಮಧ್ಯೆ ಗಲಾಟೆ ನಡೆದು ಚಾಸಾ-2 ರಮರ ಚಾಸಾ.1 ರವರಿಗೆ ಹೊಡೆದು ಅವರು ಮಕ್ಕಳನ್ನು ಕರೆದುಕೊಂಡು ತವರು ಮನೆಗೆ ಹೋಗಿದ್ದರು ಎಂದರೆ ಸರಿಯಲ್ಲ. ಹುಷಾರಿಲ್ಲದೇ ಇದ್ದ ಕಾರಣ ಹೋಗಿದ್ದರು.

ನಾನು ಮತ್ತು ಚಾಸಾ-3 ರವರು ಗಲಾಟೆ ಬಿಡಿಸಿದೆವು. ನಾವು ಬರುವಷ್ಟರಲ್ಲಿ ಗಲಾಟೆಯಾಗಿತ್ತು ಎಂದರೆ ಗಲಾಟೆ ನಡೆಯುತ್ತಿತ್ತು. ಸಂಜೆ 4 ಗಂಟೆಯ ಸಮಯದಲ್ಲಿ ಸದರಿ ರಸ್ತೆಯಲ್ಲಿ ಹೆಚ್ಚು ಜನರು ಓಡಾಡುತ್ತಾರೆ ಎಂದರೆ ಸರಿ. ಗಲಾಟೆ ನಡೆಯಿತು ಎನ್ನುವ ಸಮಯದಲ್ಲಿ ನನ್ನನ್ನು ಮತ್ತು ಚಾಸಾ-3 ರವರನ್ನು ಹೊರತುಪಡಿಸಿ ಅಶ್ವಿನಿ ಮತ್ತು ಕೋಕಿಲ ಇದ್ದರು. ಬೇರೆಯವರ ಹೆಸರು ಗೊತ್ತಿಲ್ಲ. ಗಲಾಟೆ ನಡೆಯುವಾಗ ಸುಮಾರು 10 ರಿಂದ 15 ಜನ ಸೇರಿದ್ದರು. ಚಾಸಾ-1 ರವರು ಕೆಂಪುಬಣ್ಣದ ಬಟ್ಟೆ ಧರಿಸಿದ್ದರು. ಸದರಿ ನೈಟಿ ನಿಖರವಾಗಿ ಎಲ್ಲಿ ಹರಿದಿತ್ತು ಎಂದರೆ ಎರಡು ಭುಜದ ಭಾಗದಲ್ಲಿ ಹರಿದಿತ್ತು. ಈ ಪ್ರಕರಣಕ್ಕೆ ಸಂಬಂಧಪಟ್ಟಂತೆ ಈ ದಿನ ಹೊರತುಪಡಿಸಿ ಬೇರೆ ಎಲ್ಲಿಯೂ ಹೇಳಿಕೆ ನೀಡಿಲ್ಲ ಎಂದರೆ ಇಲ್ಲ.

ಸಾಕ್ಷಿ ಮುಂದುವರಿದು ಗಲಾಟೆ ನಡೆದ 2 ದಿನ ಅಂದರೆ 22.01.2024 ರಂದು ಪೋಲಿಸರು ಬಂದಾಗ ಹೇಳಿಕೆ ಕೊಟ್ಟಿದ್ದೇನೆ. ನಿಖರವಾಗಿ ಗಲಾಟೆ ಎಷ್ಟು ಗಂಟೆಗೆ ಪ್ರಾರಂಭವಾಯಿತು ಎಂದು ಗೊತ್ತಿದೆ. ನಾನು ಹೇಳಿದಷ್ಟು ಘಟನೆ ನಡೆಯಬೇಕಾದರೆ ಸಾಮಾನ್ಯವಾಗಿ 60 ರಿಂದ 90 ನಿಮಿಷ ಬೇಕಾಗುತ್ತದೆ ಎಂದರೆ ಸರಿ.

ಗಲಾಟೆಯಾದ ನಂತರ ಚಾಸಾ-1 ರವರನ್ನು ಚಾಸಾ-2 ರವರು ಆಸ್ಪತ್ರೆಗೆ ಕರೆದುಕೊಂಡು ಹೋದರು. ಆಗ ಸಮಯ ಸುಮಾರು 5-30 ಆಗಿತ್ತು. ನಾವು ಯಾರು ಹತ್ತಿರದ ಸಂಬಂಧಿಕರು ಅವರ ಜೊತೆ ಆಸ್ಪತ್ರೆಗೆ ಹೋಗಲಿಲ್ಲ. ಸಂಜೆ 4 ಗಂಟೆಯ ನಂತರ ಶಾಲೆ ಬಿಡುವ ಸಮಯವಾಗಿದ್ದರಿಂದ ಹುಣಸೂರು ಪಟ್ಟಣ ಮತ್ತು ಕಲ್ಲುಣಿಕೆಯ ಬಳಿ ಜನ ಜಂಗುಳಿ ಜಾಸ್ತಿ ಇರುತ್ತದೆ ಎಂದರೆ ಸರಿ. ದಿಃ22.01.2024 ರಂದು ಇಬ್ಬರು ಪೋಲಿಸ್ ಪೇದೆಗಳು ಬಂದಿದ್ದರು. ನಾನು ಹೇಳಿಕೆ ಕೊಟ್ಟಾಗ ಸಂಜೆ 5 ಗಂಟೆಯಾಗಿತ್ತು. ಆಗ ನಾನು ಮತ್ತು ಚಾಸಾ-3 ಮಾತ್ರ ಇದ್ದೆವು. ದಿಃ22.01.2024 ರಂದು ಪೋಲೀಸ್ ಪೇದೆಗಳು ನಮ್ಮ ಮನೆಯ ಬಳಿ ಬಂದಿಲ್ಲ ಮತ್ತು ನಾನು ಹೇಳಿಕೆ ಕೊಟ್ಟಿಲ್ಲ ಎಂದರೆ ಸರಿಯಲ್ಲ. ಚಾಸಾ-1 ಮತ್ತು 2 ರವರು ಆಟೋದಲ್ಲಿ ಆಸ್ಪತ್ರೆಗೆ ಹೋದರು. ಆಟೋ ಯಾರು ತರಿಸಿದ್ದರು ಎಂದು ಗೊತ್ತಿಲ್ಲ. ಆಸ್ಪತ್ರೆಯಲ್ಲಿ 4 ದಿನ ಇದ್ದರು. ನಾನು ಆ ಸಮಯದಲ್ಲಿ ಅವರನ್ನು ಭೇಟಿಯಾಗಲು ಆಸ್ಪತ್ರೆಗೆ ಹೋಗಿದ್ದೆ. ದಿಃ 23.01.2024ರಂದು ಅವರು ಆಸ್ಪತ್ರೆಯಿಂದ ಬಿಡುಗಡೆಯಾಗಿ ಬಂದರು. ನನಗೆ ಈ ಘಟನೆಯ ಬಗ್ಗೆ ಯಾವುದೇ ವಿಷಯ ಗೊತ್ತಿಲ್ಲದೇ ಇದ್ದರೂ ಸಹ ಚಾಸಾ-1 ರವರು ನನ್ನ ವಾರಗಿತ್ತಿಯಾದ ಕಾರಣ ಅವರ ಪರವಾಗಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ.ಹೇ.ಕೇ.ಸ.ಇದೆ.

(ಅನಿತ)
ಪ್ರಧಾನ ಹಿರಿಯ ಸಿವಿಲ್ ಜಡ್ಜ್ ಮತ್ತು
ಜೆ.ಎಂ.ಎಫ್.ಸಿ., ಹುಣಸೂರು.